ರೂಪಾಯಿಗೆ ಟೆಂಡರನ್ನು ಕರೆದಿದ್ದೇವೆ. ಈಗ ಟೆಂಡರ್ ಸಿಸ್ಟಮ್ ಇರುವುದರಿಂದ ಅಲ್ಲಿ ಸ್ಟ್ರೈಕ್ ಮಾಡುತ್ತಿದ್ದಾರೆ. ಅದರೆ ಸರ್ಕಾರ ಯೀಲ್ಡ್ ಆಗಿಲ್ಲ. ಯಾವುದೇ ರೀತಿಯ ಒತ್ತಡ ಬಂದರೂ ಸಹ ಟೆಂಡರನ್ನು ಕರೆಯಬೇಕೆಂದು ಸರ್ಕಾರ ತೀರ್ಮಾನ ಮಾಡಿದೆ. ಈಗ ಅಲ್ಪಾವಧಿಕಾಲದ ಟೆಂಡರ್‌ನ್ನು ಕರೆಯಲಾಗಿದೆ. ಈಗಾಗಲೇ 77 ಅರ್ಜಿಗಳು ಬಂದಿವೆ. 17ನೇ ತಾರೀಖಿನೊಳಗೆ ಫೈನಲೈಸ್ ಮಾಡಿ ಆದಷ್ಟು ಬೇಗ ಅಂದರೆ, ಜೂನ್ ಮೊದಲನೆ ವಾರ ಅಥವಾ ಕೊನೆಯವಾರದೊಳಗೆ ಈ ಕಾರ್ಯವನ್ನು ಮುಗಿಸುತ್ತೇವೆ.

ಶ್ರೀ ರಂಗದೇವರಾಯಲು : ಮಾನ್ಯ ಅಧ್ಯಕ್ಷರೇ, ಇಲ್ಲಿ ಪೇಮೆಂಟ್‌ಗೋಸ್ಕರ ಸ್ಟ್ರೈಕ್ ಮಾಡುತಿದ್ದಾರೆಯೇ ಹೊರತು ಟೆಂಡರ್‌ಗೋಸ್ಕರ ಅಲ್ಲ.

ಅಧ್ಯಕ್ಷರು : ಇದಕ್ಕೋಸ್ಕರ 15 ಕೋಟಿ ರೂಪಾಯಿಗಳನ್ನು ಹೆಚ್ಚಿಗೆ ಬಿಡುಗಡೆ ಮಾಡಿದ್ದಾರೆ. ಮತ್ತು ಈ ಕೆಲಸವನ್ನು ಆದಷ್ಟು ಬೇಗ ಮುಗಿಸಿಕೊಡುತ್ತೇವೆಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ.

ಕೆರೆಯ ಹೂಳನ್ನು ತೆಗೆಯಲು ಜೆ.ಸಿ.ಬಿ ರೇಟ್ ಜಾಸ್ತಿ ಮಾಡುವುದು.

ಶ್ರೀ ಜಿ.ವಿ. ರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಅಧ್ಯಕ್ಷರೇ, ಶ್ರೀಮತಿ ಜ್ಯೋತಿ ರೆಡ್ಡಿರವರು ಕೇಳಿದಂತಹ ಪ್ರಶ್ನೆಯನ್ನೇ ನಾನು ಕಳೆದ ವಾರ ಕೇಳಿದ್ದೆ, ಈಗ ಮಾನ್ಯ ಮಂತ್ರಿಗಳು ಸರಿಯಾದ ಉತ್ತರವನ್ನು ಹೇಳಲಿಲ್ಲ. ನನ್ನ ಪ್ರಶ್ನೆ ಏನೆಂದರೆ, ಜೆ.ಸಿ.ಬಿ. ರೇಟ್ ಬಗ್ಗೆ ಹೇಳುವುದಾದರೆ ಆಗುವುದಿಲ್ಲ. ಅದರ ನಿಯಮಾವಳಿಗಳನ್ನು ಬದಲಾವಣೆ ಮಾಡಬೇಕು. ಇವತ್ತಿನ ನಿಯಮಾವಳಿ ಪ್ರಕಾರ ರೇಟ್ ಜಾಸ್ತಿ ಕೊಡುವುದಕ್ಕೆ ಆಗುವುದಿಲ್ಲವೆಂದು ಮುಖ್ಯ ಅಭಿಯಂತರರು ಅಬ್ಜಕ್ಷನ್ ಮಾಡುತ್ತಾರೆ. ಆದ್ದರಿಂದ, ಈ ನಿಯಮಾವಳಿಗಳನ್ನು ಬದಲಾವಣೆ ಮಾಡದೆ ಸುಮ್ಮನೆ ಅಧಿಕಾರಿಗಳಿಗೆ ಹೇಳಿ ರೇಟ್‌ಗಳನ್ನು ಜಾಸ್ತಿ ಮಾಗಡುವುದಕ್ಕೆ ಆಗುವುದಿಲ್ಲ. ಈಗ ಮಳೆಗಾಲ ಪ್ರಾರಂಭವಾಗಿದೆ. ಕೆಲಸ ಈಗ ಮಾಡದೇ ಇದ್ದರೆ. ಇನ್ನು ಒಂದು ವರ್ಷದ ಕಾಲ ಕೆಲಸ ಮಾಡುವುದಕ್ಕೆ ಆಗುವುದಿಲ್ಲ. ರೇಟ್ ಜಾಸ್ತಿ ಮಾಡುವುದಕ್ಕೆ ಸರ್ಕಾರ ನಿಯಾಮಾವಳಿಗಳನ್ನು ಬದಲಾವಣೆ ಮಾಡಬೇಕಾಗುತ್ತದೆ. ಈ ನಿಯಮಾವಳಿಗಳನ್ನು ಬದಲಾವಣೆ ಮಾಡುತ್ತೀರೋ ಅಥವಾ ಇಲ್ಲವೋ, ದಯವಿಟ್ಟು ಹೇಳಬೇಕು.

ಶ್ರೀ ತಿಪ್ಪೆಸ್ವಾಮಿ (ಸಣ್ಣ ನೀರಾವರಿ ಸಚಿವರು) : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿದ ಪ್ರಕಾರ ಇನ್ನೂ ಸ್ವಲ್ಪ ರೇಟನ್ನು ಜಾಸ್ತಿ ಮಾಡಿ, ಒಂದು ವಾರದೊಳಗೆ ಟೆಂಡರ್ ಕರೆದು, ಅದರಲ್ಲಿ ಯಾವುದು ಲೋಯಸ್ಟ್ ಟೆಂಡರ್ ಬರುತ್ತದೆ ಅದಕ್ಕೆ ನಾನು ಸಹಾಯ ಮಾಡುತ್ತೇನೆ. ಮತ್ತು ತಮ್ಮ ಬೇಡಿಕೆಯನ್ನು ಈಡೇರಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

ತಿಕೋಟಾ ಕ್ಷೇತ್ರದಲ್ಲಿ ನಬಾರ್ಡ್‌ನಿಂದ ರಸ್ತೆಗಳಿಗೆ ಹಣ ಸಂದಾಯ ಕುರಿತು.

ಶ್ರೀ ಶಿವಾನಂದ ಎಸ್. ಪಾಟೀಲ್ (ತಿಕೋಟಾ) : ಮಾನ್ಯ ಅಧ್ಯಕ್ಷರೇ, ಸರ್ಕಾರ ನಬಾರ್ಡ್‌ನಿಂದ ಅನೇಕ ತರಹದ ನೆರವನ್ನು ತಂದು ಗ್ರಾಮಾಂತರ ಪ್ರದೇಶಗಳಲ್ಲಿ ರಸ್ತೆ ಸಂಪರ್ಕ ಮಾಡುವುದರ ಜೊತೆಗೆ ಮಧ್ಯಮ ಮತ್ತು ಸಣ್ಣನೀರಾವರಿಗೂ ಸಹ ಹಣವನ್ನು ಒದಗಿಸಿದೆ.